# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 173 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10-12-2024 |
| ಉತ್ತರಿಸುವ ಸಚಿವರು | : | ಪೌರಾಡಳಿತ ಹಾಗೂ ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರತಿ ದಿನ ಎಷ್ಟು ಟನ್ ಕಸ ಸಂಗ್ರಹಣೆಯಾಗುತ್ತಿದೆ ; ಎಷ್ಟು ಟನ್ ಕಸ ವಿಲೇವಾರಿ ಮಾಡಲಾಗುತ್ತಿದೆ ; (ಜಿಲ್ಲಾವಾರು ವಿವರ ನೀಡುವುದು) | • ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ (ಬಿ.ಬಿ.ಎಂ.ಪಿ. ಹೊರತುಪಡಿಸಿ) ಪ್ರತಿದಿನ 6640 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಪ್ರತಿದಿನ ಸುಮಾರು 4840 ಟನ್ ಗಳಷ್ಟು ತ್ಯಾಜ್ಯ ಸಂಸ್ಕರಣೆಯಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಆ) | ಪರಿಸರಕ್ಕೆ ಹಾನಿ ಉಂಟು ಮಾಡುವ ಘನ ಹಾಗೂ ದ್ರವ್ಯ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡದ ಕಾರಣಕ್ಕೆ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ದಂಡ ವಿಧಿಸಿರುವುದು ನಿಜವೇ; ಹಾಗಿದ್ದಲ್ಲಿ ಎಷ್ಟು ದಂಡ ವಿಧಿಸಿದೆ ; | • ಹೌದು.<br><br>ನಗರ ಪ್ರದೇಶದಲ್ಲಿ ಉತ್ಪಾದನೆಯಾಗುವ ಘನ ಹಾಗೂ ದ್ರವ ತ್ಯಾಜ್ಯ ವಸ್ತುಗಳ ಸಂಸ್ಕರಣೆಯಲ್ಲಿ ಇರುವ ಕೊರತೆಯ ಕಾರಣದಿಂದಾಗಿ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯು ಪ್ರಕರಣ ಸಂಖ್ಯೆ: OA 606/2018 ರಲ್ಲಿ ರಾಜ್ಯ ಸರ್ಕಾರಕ್ಕೆ ರೂ. 2900 ಕೋಟಿಗಳ ಪರಿಸರ ಹಾನಿ ಪರಿಹಾರ ಮೊತ್ತವನ್ನು ವಿಧಿಸಿರುತ್ತದೆ. |
| ಇ) | ಎನ್.ಜಿ.ಟಿ. ಹಲವು ಬಾರಿ ಎಚ್ಚರಿಕೆ ನೀಡಿದ್ದರೂ ಸಮರ್ಪಕವಾಗಿ ಕಸ ವಿಲೇವಾರಿ ಮಾಡುವಲ್ಲಿ ವಿಫಲವಾಗಲು ಕಾರಣವೇನು; ತಮ್ಮ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಣೆ ಮಾಡದ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು; | ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016ರ ಉಪಬಂಧಗಳನ್ವಯ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮರ್ಪಕ ಹಾಗೂ ವೈಜ್ಞಾನಿಕ ತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿಗಾಗಿ ಸರ್ಕಾರದ ವತಿಯಿಂದ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.<br><br>ಆದ್ಯಾಗ್ಯೂ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ವಿಲೇವಾರಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಈ ಕೆಳಕಂಡ ಸವಾಲುಗಳನ್ನು ಎದುರಿಸುತ್ತಿವೆ.<br><br>• ಕೆಲವೊಂದು ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಅಗತ್ಯ ಜಮೀನುಗಳು ಲಭ್ಯವಿರುವುದಿಲ್ಲ.<br>• ಜಮೀನುಗಳು ಲಭ್ಯವಿರುವ ಕೆಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕರ / ಗ್ರಾಮಸ್ಥರ ಪ್ರತಿಭಟನೆಯಿಂದ ಸದರಿ ಜಮೀನುಗಳಲ್ಲಿ ತ್ಯಾಜ್ಯ ವಿಲೇವಾರಿ ಕೈಗೊಳ್ಳಲು ಕಷ್ಟ ಸಾಧ್ಯವಾಗಿರುತ್ತದೆ.<br>• ಕೆಲವೊಂದು ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ವಿಲೇವಾರಿ ಜಮೀನಿನ ಮೇಲೆ ನ್ಯಾಯಾಲಯಗಳಲ್ಲಿ |

| | | |
|---|---|---|
| | | ಪ್ರಕರಣ ದಾಖಲಾಗಿರುವ ಕಾರಣ ತ್ಯಾಜ್ಯ ವಿಲೇವಾರಿ ಕಷ್ಟ ಸಾಧ್ಯವಾಗಿರುತ್ತದೆ.<br>• ಬಹಳಷ್ಟು ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ನಿರ್ವಹಣೆಗೆ ಅಗತ್ಯ ಮಾನವ ಸಂಪನ್ಮೂಲದ ಕೊರತೆಯಿರುತ್ತವೆ.<br><br>• ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಸ್ತುತ ಶೇ. 73 ರಷ್ಟು ತ್ಯಾಜ್ಯ ಸಂಸ್ಕರಣೆಯಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆಗಳು ಶೇ. 100 ರಷ್ಟು ತ್ಯಾಜ್ಯ ಸಂಸ್ಕರಣೆಗೆ ಅಗತ್ಯವಿರುವ Material Recovery Facility, Processing shed, Windrow platform, Trammel screens, Sanitary Landfill ಮತ್ತು ಇತರೆ ಮೂಲ ಸೌಕರ್ಯವನ್ನು ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಅಭಿವೃದ್ಧಿಪಡಿಸಲು ಸಿದ್ಧಪಡಿಸಿದ ಯೋಜನಾ ವರದಿಗೆ ಸರ್ಕಾರದ ಅನುಮೋದನೆಯನ್ನು ನೀಡಿರುತ್ತದೆ.<br>• ಸ್ವಚ್ಛ ಭಾರತ ಮಿಷನ್(ನ)- 1.0 ರಡಿ ತ್ಯಾಜ್ಯ ಸಂಸ್ಕರಣೆ ಹಾಗೂ ವಿಲೇವಾರಿಗಾಗಿ ಈಗಾಗಲೆ ರೂ. 854 ಕೋಟಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ ಹಾಗೂ ಸ್ವಚ್ಛ ಭಾರತ ಮಿಷನ್(ನ)-2.0 ರಡಿ ರೂ. 709.30 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.<br><br>ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ;<br><br>• ಪ್ರತಿ ಮಾಹೆಯಾನ ಸರ್ಕಾರದ / ಪೌರಾಡಳಿತ ನಿರ್ದೇಶನಾಲಯದ ಮಟ್ಟದಲ್ಲಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.<br>• ಪ್ರತಿ ಮಾಹೆಯಾನ ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಅರೆ ಸರ್ಕಾರಿ ಪತ್ರಗಳನ್ನು ಹೊರಡಿಸಲಾಗುತ್ತಿದೆ.<br>• ನಿಯಮಿತವಾಗಿ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಕಾರ್ಯಕ್ಷಮತೆಯ ತಪಾಸಣೆಗೆ ಪೌರಾಡಳಿತ ನಿರ್ದೇಶನಾಲದಿಂದ ಅಧಿಕಾರಿಗಳು ಬೇಟಿ ನೀಡಲಾಗುತ್ತಿದೆ.<br>• ಕುಂಟಿತ ಪ್ರಗತಿ ಸಾಧಿಸಿರುವ ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರಿಗೆ / ಸಂಬಂಧಪಟ್ಟ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್‌ಗಳನ್ನು ಜಾರಿಗೊಳಿಸಲಾಗಿದೆ. |
| ಈ) | ಎನ್.ಜಿ.ಟಿ. ಆದೇಶದ ನಂತರ ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಕಸ ವಿಲೇವಾರಿ ಮಾಡಲು ಸರ್ಕಾರ | • 192 ನಗರ ಸ್ಥಳೀಯ ಸಂಸ್ಥೆಗಳಲ್ಲಿ 74.98 ಲಕ್ಷ ಟನ್ ಪಾರಂಪರಿಕ ತ್ಯಾಜ್ಯ ಶೇಖರಣೆಯಾಗಿರುತ್ತದೆ. ಈ ನಗರಗಳು ಪಾರಂಪರಿಕ ತ್ಯಾಜ್ಯ ನಿರ್ವಹಣೆಗೆ |

| | | |
|---|---|---|
| | ಕೈಗೊಂಡಿರುವ ಕ್ರಮಗಳೇನು; ಕಸ ವಿಲೇವಾರಿಗೆ ಟೆಂಡರ್ ಕರೆಯಲಾಗಿದೆಯೇ ; ಯಾವ ಸಂಸ್ಥೆಗೆ ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ ? (ಸಮಗ್ರ ವಿವರ ನೀಡುವುದು) | ಸಿದ್ಧಪಡಿಸಿದ ಡಿ.ಪಿ.ಆರ್. ಗಳಿಗೆ ರಾಜ್ಯ ಮಟ್ಟದ ಉನ್ನತಾಧಿಕಾರಯುಕ್ತ ಸಮಿತಿಯು ಅನುಮೋದನೆ ನೀಡಿರುತ್ತದೆ.<br>• 20,000 ಟನ್ ಗಿಂತ ಕಡಿಮೆ ಪಾರಂಪರಿಕ ತ್ಯಾಜ್ಯವಿರುವ 100 ನಗರ/ಪಟ್ಟಣಗಳಲ್ಲಿ In house model ಅನುಸರಿಸಿ Bioremediation ಮಾಡಲಾಗುತ್ತಿದೆ. ಈ ಪದ್ಧತಿಯಲ್ಲಿ ನಗರಸ್ಥಳೀಯ ಸಂಸ್ಥೆಯಲ್ಲಿ ಲಭ್ಯವಿರುವ ಯಂತ್ರೋಪಕರಣಗಳು ಮತ್ತು ಮಾನವ ಸಂಪನ್ಮೂಲವನ್ನು ಉಪಯೋಗಿಸಿ ಅಗತ್ಯಾನುಸಾರ ಸೌಕರ್ಯಗಳನ್ನು ಕೆ.ಟಿ.ಪಿ.ಪಿ. ನಿಯಮಾವಳಿಗಳ ರೀತ್ಯಾ ಪಡೆದು ಪಾರಂಪರಿಕ ತ್ಯಾಜ್ಯ ನಿರ್ವಹಣೆ ಮಾಡಲಾಗುತ್ತಿದೆ.<br>• ಉಳಿದ 92 ನಗರಸ್ಥಳೀಯ ಸಂಸ್ಥೆಗಳು ಪಾರಂಪರಿಕ ತ್ಯಾಜ್ಯ ನಿರ್ವಹಣೆಗೆ Hire Model ಅನುಸರಿಸುತ್ತಿವೆ. ಇದರಲ್ಲಿ SWM Site ನಲ್ಲಿ ಶೇಖರಣೆಯಾಗಿರುವ ಹಳೆಯ ತ್ಯಾಜ್ಯದ ರಾಶಿಯನ್ನು ತೆರವುಗೊಳಿಸಿ Bioremediation ಮಾಡುವ ಎಲ್ಲಾ ಕೆಲಸವನ್ನು ಗುತ್ತಿಗೆ ನೀಡಲಾಗುತ್ತಿದೆ.<br>• 91 ನಗರಗಳು ಟೆಂಡರ್ ಕರೆದಿರುತ್ತದೆ. 18 ನಗರಗಳಲ್ಲಿ ಕೆಲಸ ಪ್ರಾರಂಭಗೊಂಡಿರುತ್ತದೆ ಹಾಗೂ 7 ನಗರಗಳಲ್ಲಿ Bioremediation ಕೆಲಸ ಪೂರ್ಣಗೊಂಡಿರುತ್ತದೆ. ಗುತ್ತಿಗೆ ಪಡೆದ ಸಂಸ್ಥೆ ಮತ್ತು ಕಾರ್ಯಾದೇಶದ ಮೊತ್ತದ ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ.<br>• ವಿಸ್ತೃತ ಯೋಜನಾ ವರದಿಗಳನ್ನು ನಿಗಧಿತ ಕಾಲಾವಧಿಯೊಳಗೆ ಅನುಷ್ಠಾನಗೊಳಿಸುವಂತೆ ನಿಯಮಿತವಾಗಿ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಗತಿ ಪರಿಶೀಲನೆ ಸಭೆಗಳನ್ನು ಕೈಗೊಳ್ಳಲಾಗಿರುತ್ತದೆ. |

(ಕಡತ ಸಂಖ್ಯೆ: ನಅಇ 234 ಸಿಎಸ್‌ಎಸ್ 2024)

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು

**ರಾಜ್ಯದಲ್ಲಿ ಉತ್ಪತಿಯಾಗುತ್ತಿರುವ ಮತ್ತು ಸಂಸ್ಕರಣೆಯಾಗುತ್ತಿರುವ ತ್ಯಾಜ್ಯದ ಜಿಲ್ಲಾವಾರು ವಿವರ**

| ಕ್ರ ಸಂ | ಜಿಲ್ಲೆಯ ಹೆಸರು | ತ್ಯಾಜ್ಯ ಉತ್ಪತ್ತಿ ಪ್ರಮಾಣ (ಟಿ.ಪಿ.ಡಿ) | ಸಂಸ್ಕರಣೆ (ಟಿ.ಪಿ.ಡಿ) | ಬಾಕಿ (ಟಿ.ಪಿ.ಡಿ) |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 135 | 117 | 19 |
| 2 | ಬೆಂಗಳೂರ ನಗರ | 145 | 120 | 25 |
| 3 | ಚಿಕ್ಕಬಳ್ಳಾಪುರ | 107 | 46 | 61 |
| 4 | ಚಿತ್ರದುರ್ಗ | 129 | 111 | 18 |
| 5 | ದಾವಣಗೆರೆ | 235 | 189 | 46 |
| 6 | ಕೋಲಾರ | 222 | 107 | 115 |
| 7 | ರಾಮನಗರ | 126 | 58 | 68 |
| 8 | ಶಿವಮೊಗ್ಗ | 318 | 262 | 56 |
| 9 | ತುಮಕೂರು | 255 | 184 | 71 |
| 10 | ಚಾಮರಾಜನಗರ | 73 | 51 | 22 |
| 11 | ಚಿಕ್ಕಮಗಳೂರು | 114 | 65 | 49 |
| 12 | ದಕ್ಷಿಣ ಕನ್ನಡ | 412 | 391 | 21 |
| 13 | ಹಾಸನ | 140 | 112 | 28 |
| 14 | ಕೊಡಗು | 41 | 25 | 16 |
| 15 | ಮಂಡ್ಯ | 139 | 95 | 43 |
| 16 | ಮೈಸೂರು | 571 | 508 | 63 |
| 17 | ಉಡುಪಿ | 116 | 97 | 18 |
| 18 | ಬಾಗಲಕೋಟೆ | 237 | 163 | 74 |
| 19 | ಬೆಳಗಾವಿ | 581 | 365 | 192 |
| 20 | ಧಾರವಾಡ | 466 | 414 | 52 |
| 21 | ಗದಗ | 148 | 69 | 79 |
| 22 | ಹಾವೇರಿ | 131 | 68 | 63 |
| 23 | ಉತ್ತರ ಕನ್ನಡ | 137 | 109 | 28 |
| 24 | ಬಳ್ಳಾರಿ | 282 | 169 | 113 |
| 25 | ಬೀದರ | 166 | 139 | 27 |
| 26 | ವಿಜಯಪುರ | 231 | 159 | 72 |
| 27 | ಕಲಬುರಗಿ | 361 | 330 | 31 |
| 28 | ಕೊಪ್ಪಳ | 121 | 87 | 35 |
| 29 | ರಾಯಚೂರು | 220 | 98 | 122 |
| 30 | ವಿಜಯನಗರ | 196 | 97 | 100 |
| 31 | ಯಾದಗಿರಿ | 85 | 37 | 48 |
| **ಒಟ್ಟು** | | **6640** | **4840** | **1800** |

# ಅನುಬಂಧ-2

| ಪಾರಂಪರಿಕ ತ್ಯಾಜ್ಯ ತೆರವುಗೊಳಿಸುವಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ | | | | | |
|---|---|---|---|---|---|
| ಸಂಖ್ಯೆ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ | ಗುತ್ತಿಗೆದಾರನ ಹೆಸರು | ನಿಗದಿತ ಮೊತ್ತ (ರೂ. ಲಕ್ಷಗಳಲ್ಲಿ) | ಪ್ರಸ್ತುತ ಸ್ಥಿತಿ |
| 1 | ಬೆಳಗಾವಿ | ಸಂಕೇಶ್ವರ | ಪಿ.ಆರ್. ಪಾಟಿಲ್ | 10 | ಕಾಮಗಾರಿ ಪ್ರಗತಿಯಲ್ಲಿದೆ |
| 2 | ಬೆಂಗಳೂರು | ದೊಡ್ಡಬಳ್ಳಾಪುರ | ನೆಪ್ಟ್ಯೂನ್ ಆಟೊಮೇಷನ್ | 364.68 | ಕಾಮಗಾರಿ ಪ್ರಗತಿಯಲ್ಲಿದೆ |
| 3 | ಬೀದರ್ | ಬಸವಕಲ್ಯಾಣ | ಪ್ರದೀಪ್ ಹನುಮಂತ್ ಜಾದವ್ | 309.07 | ಕಾಮಗಾರಿ ಪ್ರಗತಿಯಲ್ಲಿದೆ |
| 4 | ಬೀದರ್ | ಬೀದರ್ | ಪ್ರದೀಪ್ ಹನುಮಂತ್ ಜಾದವ್ | 568.89 | ಕಾಮಗಾರಿ ಪ್ರಗತಿಯಲ್ಲಿದೆ |
| 5 | ಚಿಕ್ಕಮಗಳೂರು | ಚಿಕ್ಕಮಗಳೂರು | ನೆಪ್ಟ್ಯೂನ್ ಆಟೊಮೇಷನ್ | 480.32 | ಕಾಮಗಾರಿ ಪ್ರಗತಿಯಲ್ಲಿದೆ |
| 6 | ದಕ್ಷಿಣ ಕನ್ನಡ | ಮಂಗಳೂರು | ನ್ಯಾಷನಲ್ ಫೆಡರೇಶನ್ ಆಫ್ ಫಾರ್ಮರ್ಸ್ ಪ್ರೊಕ್ಯೂರ್‌ಮೆಂಟ್ ಪ್ರೊಸೆಸಿಂಗ್ & ರಿಟೇಲಿಂಗ್ ಕೋ ಆಪರೇಟಿವ್ಸ್ ಆಫ್ ಇಂಡಿಯಾ ಲಿಮಿಟೆಡ್ | 5638.52 | ಕಾಮಗಾರಿ ಪ್ರಗತಿಯಲ್ಲಿದೆ |
| 7 | ದಾವಣಗೆರೆ | ದಾವಣಗೆರೆ | ಹಾರ್ದಿಕ್ ಭಿಕಭಾಯ್ ಕುಂತ್ | 1919.42 | ಕಾಮಗಾರಿ ಪ್ರಗತಿಯಲ್ಲಿದೆ |
| 8 | ಧಾರವಾಡ | ಕುಂದಗೋಳ | ಜೆ.ಎಂ.ಎಸ್. ಬಯೊಟೆಕ್ | 436.48 | ಕಾಮಗಾರಿ ಪ್ರಗತಿಯಲ್ಲಿದೆ |
| 3 | ಧಾರವಾಡ | ಅಳ್ನಾವರ | | | ಪೂರ್ಣಗೊಂಡಿರುತ್ತದೆ |
| 4 | ಧಾರವಾಡ | ಅಣ್ಣಿಗೇರಿ | | | ಪೂರ್ಣಗೊಂಡಿರುತ್ತದೆ |
| 5 | ಧಾರವಾಡ | ಕಲಘಟಗಿ | | | ಪೂರ್ಣಗೊಂಡಿರುತ್ತದೆ |
| 9 | ಧಾರವಾಡ | ನವಲಗುಂದ | | | ಕಾಮಗಾರಿ ಪ್ರಗತಿಯಲ್ಲಿದೆ |
| 10 | ಧಾರವಾಡ | ಹುಬ್ಬಳ್ಳಿ-ಧಾರವಾಡ | ಹಾರ್ದಿಕ್ ಭಿಕಭಾಯ್ ಕುಂತ್ | 2514.6 | ಕಾಮಗಾರಿ ಪ್ರಗತಿಯಲ್ಲಿದೆ |
| 11 | ಕಲಬುರಗಿ | ಅಫಜಲ್‌ಪುರ | ನೆಪ್ಟ್ಯೂನ್ ಆಟೊಮೇಷನ್ | 266 | ಕಾಮಗಾರಿ ಪ್ರಗತಿಯಲ್ಲಿದೆ |

| ಪಾರಂಪರಿಕ ತ್ಯಾಜ್ಯ ತೆರವುಗೊಳಿಸುವಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ | | | | | |
|---|---|---|---|---|---|
| ಸಂಖ್ಯೆ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ | ಗುತ್ತಿಗೆದಾರನ ಹೆಸರು | ನಿಗದಿತ ಮೊತ್ತ (ರೂ. ಲಕ್ಷಗಳಲ್ಲಿ) | ಪ್ರಸ್ತುತ ಸ್ಥಿತಿ |
| 12 | ಮೈಸೂರು | ಮೈಸೂರು | ಹಾರ್ದಿಕ್ ಭಿಕಭಾಯ್ ಕುಂತ್ | 5248.09 | ಕಾಮಗಾರಿ ಪ್ರಗತಿಯಲ್ಲಿದೆ |
| 13 | ತುಮಕೂರು | ತುಮಕೂರು | ನೆಪ್ಚ್ಯೂನ್ ಆಟೋಮೇಷನ್ ಮತ್ತು ಲೂನಾರ್ ಪ್ಲಾಸ್ಟಿಕ್ | 498 | ಕಾಮಗಾರಿ ಪ್ರಗತಿಯಲ್ಲಿದೆ |
| 14 | ಉಡುಪಿ | ಕಾರ್ಕಳ | ಕೆ. ಅನಂತಕೃಷ್ಣ ಶೆಟ್ಟಿ ಕ್ಲಾಸ್-೧, ಗುತ್ತಿಗೆದಾರ. ಬಿ.ಬಿ. ಕಾಂಪೌಂಡ್ ಪೆರವಾಜಿ, ಕಾರ್ಕಳ | 186.57 | ಕಾಮಗಾರಿ ಪ್ರಗತಿಯಲ್ಲಿದೆ |
| 15 | ವಿಜಯಪುರ | ಬಸವನ ಬಾಗೇವಾಡಿ | ಹಿಂದ ಅಗ್ರೋ, ಪೂಣಾ | 162.33 | ಕಾಮಗಾರಿ ಪ್ರಗತಿಯಲ್ಲಿದೆ |
| 16 | ವಿಜಯಪುರ | ಇಂಡಿ | ನೆಪ್ಚ್ಯೂನ್ ಆಟೋಮೇಷನ್ | 219.95 | ಕಾಮಗಾರಿ ಪ್ರಗತಿಯಲ್ಲಿದೆ |
| 17 | ವಿಜಯಪುರ | ಮುದ್ದೇಬಿಹಾಳ | ನೆಪ್ಚ್ಯೂನ್ ಆಟೋಮೇಷನ್ | 198.44 | ಕಾಮಗಾರಿ ಪ್ರಗತಿಯಲ್ಲಿದೆ |
| 18 | ವಿಜಯಪುರ | ತಾಳಿಕೋಟೆ | ನೆಪ್ಚ್ಯೂನ್ ಆಟೋಮೇಷನ್ | 140.15 | ಕಾಮಗಾರಿ ಪ್ರಗತಿಯಲ್ಲಿದೆ |
| 19 | ಬಾಗಲಕೋಟೆ | ರಬಕವಿ ಬನಹಟ್ಟಿ | ಈಗಲ್ ಸರ್ವಿಸ್ ಲಾತುರ್ | 61 | ಪೂರ್ಣಗೊಂಡಿರುತ್ತದೆ |
| 20 | ಬೆಳಗಾವಿ | ಕೊಣ್ಣೂರು | ಹುಲಿಕಟ್ಟಿ | 24 | ಪೂರ್ಣಗೊಂಡಿರುತ್ತದೆ |
| 21 | ಧಾರವಾಡ | ಅಳ್ನಾವರ | ಜೆ.ಎಂ.ಎಸ್. ಬಯೋಟೆಕ್ | 436.48 | ಪೂರ್ಣಗೊಂಡಿರುತ್ತದೆ |
| 22 | ಧಾರವಾಡ | ಅಣ್ಣಿಗೇರಿ | ಜೆ.ಎಂ.ಎಸ್. ಬಯೋಟೆಕ್ | | |
| 23 | ಧಾರವಾಡ | ಕಲಘಟಗಿ | ಜೆ.ಎಂ.ಎಸ್. ಬಯೋಟೆಕ್ | | |
| 24 | ಶಿವಮೊಗ್ಗ | ಶಿವಮೊಗ್ಗ | ನೆಪ್ಚ್ಯೂನ್ ಆಟೋಮೇಷನ್ | 207 | ಪೂರ್ಣಗೊಂಡಿರುತ್ತದೆ |
| 25 | ವಿಜಯಪುರ | ವಿಜಯಪುರ | ನೆಪ್ಚ್ಯೂನ್ ಆಟೋಮೇಷನ್ | 422.8 | ಪೂರ್ಣಗೊಂಡಿರುತ್ತದೆ |

Bhanumathi
AEE, DMA